ಆ) ಈ ಕಾಮಗಾರಿಗಳಿಗೆ ಈವರೆಗೆ ವೆಚ್ಚವಾದ ಹಣವೆಷ್ಟು ? ಇವುಗಳಲ್ಲಿ ಕೆಲಸಕ್ಕೆ ತೊಡಗಿದ ಕಾರ್ಮಿಕರ ಸಂಖ್ಯೆ ಎಷ್ಟು ?

ಇ) ರಸ್ತೆ ನಿರ್ಮಾಣದ ಹೊರತು ಇತರೆ ಕಾಮಗಾರಿಗಳು ಎಷ್ಟು ?

ಈ) ಬರುವ ಮಳೆಗಾಲದವರೆಗೆ ಕಾಮಗಾರಿಗಳನ್ನು ಮುಂದುವರಿಸಿಕೊಂಡು ಹೋಗಲಾಗುವುದೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಆ) ವಿಜಾಪುರ ಜಿಲ್ಲೆಯಲ್ಲಿ ಇದುವರೆಗೆ ಒಟ್ಟು ೭೫೮ ಕಾಮಗಾರಿಗಳನ್ನು (ಬರಗಾಲ) ತೆಗೆದುಕೊಂಡು ಅವುಗಳ ಪೈಕಿ ಒಟ್ಟು ೪೨೮ ಕಾಮಗಾರಿಗಳನ್ನು ಪೂರ್ತಿಗೊಳಿಸಲಾಗಿದೆ.

ಆ) ವಿಜಾಪುರ ಜಿಲ್ಲೆಯಲ್ಲಿ ಪರಿಹಾರ ಕಾಮಗಾರಿಗಳಿಗೆ ಇದುವರೆಗೆ ೨೩೫.೪೩೧ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು, ೧೪.೪೭೩ ಜನರಿಗೆ ಉದ್ಯೋಗ ಕಲ್ಪಿಸಲಾಗಿದೆ.

ಇ) ರಸ್ತೆ ಕಾಮಗಾರಿಗಳು ಜಾತ ೨೧೦ ಕಾಮಗಾರಿಗಳು.

ಈ) ಹೌದು.

ಚಿಕ್ಕಮಗಳೂರು ತಾಲ್ಲೂಕು ಕ್ಷಾಮಕ್ಕೆ ತುತ್ತಾಗಿರುವ ಬಗ್ಗೆ

೩೪೦. ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕಮಗಳೂರು ಕಸಬ ಹಾಗೂ ಅಂಬಳೆ ಹೋಬಳಿಗಳು ಕ್ಷಾಮಕ್ಕೆ ತುತ್ತಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಆ) ಹಾಗಿದ್ದಲ್ಲಿ, ಸರ್ಕಾರದವರು ಕೈಕೊಂಡ ಪರಿಹಾರ ಕ್ರಮಗಳಾವುವು ಹಾಗೂ ಅವು ವಿಳಂಬವಾಗಲು ಕಾರಣಗಳೇನು ?

ಇ) ಪರಿಹಾರವನ್ನು ಯಾವ ರೀತಿ ಸೂಚಿಸಲಾಗುವುದು ಹಾಗೂ ಕಂದಾಯ ಈ ವರ್ಷ ಮುನ್ನಾ ಮಾಡುವ ಬಗ್ಗೆ ಉದ್ದೇಶಿಸಲಾಗಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು).—

ಅ) ಬಂದಿದೆ.

ಆ) ೧ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳುವುದರಲ್ಲಿ ಯಾವ ರೀತಿಯ ವಿಳಂಬವು ಆಗಿಲ್ಲ.

೨ ಈ ಕೆಳಕಂಡ ಪರಿಹಾರ ಕಾರ್ಯಕ್ರಮಗಳನ್ನು ಸರ್ಕಾರ ಕೈಗೊಂಡಿದೆ.

ಅ) ಕೆಲಸ ಮಾಡಲು ಮುಂದೆ ಬಂದ ಜನರಿಗೆ ಕೆಲಸ ಒದಗಿಸುವುದು.

ಆ) ಕೊಳವೆ ಬಾವಿಗಳನ್ನು ಕೊರೆಯುವುದು.

ಇ) ಮೇವು ಸರಬರಾಜು ಮಾಡುವುದು.

ಈ) ಗೋಶಾಲೆಗಳನ್ನು ತೆರೆಯುವುದು.

ಇ) ಉದ್ಯೋಗ ಕಲ್ಪಿಸುವಾಗ ಈಗಾಗಲೇ ೧೦೨ ಕೆಲಸಗಳನ್ನು ಪೂರೈಸಲಾಗಿದೆ ಹಾಗೂ ೮೬ ಕೆಲಸಗಳು ಹಾಲಿ ಚಾಲ್ತಿಯಲ್ಲಿವೆ. ಈಗಾಗಲೇ ೩೯.೬೮ ಲಕ್ಷ ರೂ. ಗಳನ್ನು ಖರ್ಚು ಮಾಡಿ ಪ್ರತಿ ದಿನ ೪೯೦೫ ಜನರಿಗೆ ಉದ್ಯೋಗ ಒದಗಿಸಲಾಗಿದೆ.

೨) ಈಗಾಗಲೇ ೪೬೫ ಕೊಳವೆ ಬಾವಿಗಳು ಈ ಪ್ರದೇಶದಲ್ಲಿದ್ದು ಕಾಡಿಯುವ ನೀರನ್ನು ಒದಗಿಸಲಾಗುತ್ತಿದೆ.

ಸ) ೫೫ ಮೆಂಟ್ರಿಕ್ ಟನ್ ಮೇವನ್ನು ೨೭ ಹಳ್ಳಿಗಳಿಗೆ ಸರಬರಾಜು ಮಾಡಿದ್ದು ೩೧೨ ಜನರಿಗೆ ಅನುಕೂಲವಾಗಿದೆ.

ಳ) ಕಡೂರು ತಾಲ್ಲೂಕಿನ ಬೀರೂರಿನಲ್ಲಿ ಒಂದು ಗೋಶಾಲೆಯನ್ನು ತೆರೆದಿದ್ದು ಈ ಗೋಶಾಲೆಯು ಕಸಬಾ ಮತ್ತು ಅಂಬಳೆ ಹೋಬಳಿಗಳಿಗೆ ಹತ್ತಿರವಾಗಿದ್ದು ಈ ಪ್ರದೇಶದ ರೈತರು ಇದರ ಸದುಪಯೋಗ ಪಡೆಯಬಹುದು.

ಕ) ಕಂದಾಯ ಮನ್ನಾ ಮಾಡುವ ವಿಷಯು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ವಿದ್ಯುಚ್ಛಕ್ತಿ ಪಂಪಾಟರ್‌ಗಳನ್ನು ೧೦ ಹೆಚ್. ಪಿ. ಮೋಟಾರ್ ಉಪಯೋಗಿಸಿಂವ ರೈತರಿಗೆ ಅಳವಡಿಸುವ ಬಗ್ಗೆ.

೨೮೨. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ವಿದ್ಯುತ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಈ ಹಿಂದೆ ೧೦ ಅಶ್ವ ಶಕ್ತಿಯವರೆಗೆ ಪಂಪು ಸೆಟ್ಟು ಪಡೂಲಕ ನೀರು ಉಪಯೋಗಿಸುತ್ತಿದ್ದ ರೈತರಿಗೆ ಮೀಟರ್ ಹಾಕದೆ ರಿಯಾಯಿತಿ ರೂಪದಲ್ಲಿ ಅಶ್ವ ಶಕ್ತಿ ಒಂದಕ್ಕೆ ಹಣ ಲೆಕ್ಕ ಮಾಡಿ ವಸೂಲು ಮಾಡುತ್ತಿದ್ದುದು ನಿಜವೆ ?

ಆ) ಈ ೧೦ ಅಶ್ವ ಶಕ್ತಿ ಒಳಗೆ ಇರುವ ರೈತರಿಗೆ ಮಾತ್ರ ಈ ಅನುಕೂಲವೆಂದು ೧೦ ಅಶ್ವ ಶಕ್ತಿ ಮೋಟಾರ್ ಉಪಯೋಗಿಸುತ್ತಿದ್ದ ರೈತರಿಗೆ ಮೀಟರ್ ಅಳವಡಿಸಿರುವುದು ನಿಜವೇ ?

ಇ) ಈ ಹಿಂದಿನ ಸೌಲಭ್ಯದಂತೆ ೧೦ ಅಶ್ವ ಶಕ್ತಿ ಮೋಟಾರ್ ಹಾಕಿರುವ ರೈತರಿಗೂ ಈ ಸೌಲಭ್ಯ ವಿಸ್ತರಿಸಲು ಸರಕಾರ ಯೋಚಿಸಿದೆಯೆ ?

ಶ್ರೀ ಜೆ. ಎಸ್. ದೇಶ್‌ಮುಖ್ (ವಿದ್ಯುಚ್ಛಕ್ತಿ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ನಿಜ

ಆ) ಹೌದು. ೨೬-೯-೧೯೮೫ರಲ್ಲಿ ವಿದ್ಯುತ್ ದರವನ್ನು ಪರಿಷ್ಕರಿಸಿದ ನಂತರ, ಈ ಮೇಲಿನ ರಿಯಾಯಿತಿಯನ್ನು ೧೦ ಅಶ್ವ ಶಕ್ತಿ ಪಂಪುಸೆಟ್ಟಿಗೆ ಅನ್ವಯಿಸಿರುವುದಿಲ್ಲ.

ಇ) ದಿನಾಂಕ ೮-೧೧-೧೯೮೬ರಲ್ಲಿ ಮಾಡಿರುವ ತಿದ್ದುಪಡಿ ರೀತ್ಯಾ ೫ ರಿಂದ ೧೦ ಅಶ್ವಶಕ್ತಿ (೧೦ ಅಶ್ವಶಕ್ತಿ ಮೋಟಾರ್ ಸಹ ಒಳಗೊಂಡಂತೆ) ಮೋಟಾರ್ ಹಾಕಿರುವ ರೈತರಿಗೂ ಸಹ ಈ ಸೌಲಭ್ಯವನ್ನು ವಿಸ್ತರಿಸಿ ಸರ್ಕಾರ ಆಜ್ಞೆ ಮಾಡಿದೆ.

ಕರ್ನಾಟಕ ಭೂ ಸುಧಾರಣಾ ಕಾನೂನು

೨೮೪. ಶ್ರೀ ಚಂದ್ರಶೇಖರ್ ಮಾಮನಿ (ಪರಸಗಡ).—ಮಾನ್ಯ ಕಂದಾಯ ಹಾಗೂ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಭೂ ಸುಧಾರಣಾ ಕಾನೂನು ಪ್ರಕಾರ ಕೆಲವು ಗುತ್ತಿಗೆ ಜಮೀನುಗಳು ಸರಕಾರ ಜಮೀನು ಆಗಿವೆ. ಇಂಥ ಜಮೀನುಗಳಿಗೆ ಗುತ್ತಿಗೆದಾರರು ಖಳನೇ ನಂಬರಿನ ಫಾರಂ ತುಂಬಿ ಅರ್ಜಿ ಸಲ್ಲಿಸದೆ ಹಾಗೆ ಉಳಿದಿರುವುದರಿಂದ ಈ ಜಮೀನುಗಳನ್ನು ಸರಕಾರದವರು ಕಾನೂನು ಪ್ರಕಾರ ತನ್ನ ವಶಕ್ಕೆ ತೆಗೆದುಕೊಂಡು ಹೆಚ್ಚುವರಿ ಜಮೀನು ಅಂತಾ ಪರಿಗಣಿಸಿ ಭೂ ರಹಿತರಿಗೆ ಹಂಚುವರೇ :

ಆ) ಹಾಗಿದ್ದಲ್ಲಿ, ಈ ಪ್ರಕಾರದ ಜಮೀನು ಸವದತ್ತಿ ತಾಲ್ಲೂಕಿನಲ್ಲಿ ಎಷ್ಟು ಎಕರೆ ಇದೆ ಹಾಗೂ ಈ ಬಗ್ಗೆ ಸರಕಾರದವರು ಕೈಕೊಂಡ ಕ್ರಮವೇನು :

ಇ) ಭೂ ನ್ಯಾಯ ಮಂಡಳಿಯು ಚೌಕಾಶಿ ಮಾಡಿ ಗುತ್ತಿಗೆದಾರ ಅಲ್ಲಾ ಎಂದು ತಿರಸ್ಕರಿಸಿದ ಸಂದರ್ಭಗಳಲ್ಲಿ ಜಮೀನಿನ ಹಕ್ಕು ಪತ್ರಿಕೆಗಳಲ್ಲಿ ಸರಕಾರವೆಂಬ ಹೆಸರು ಇಲ್ಲದಿರುವುದರಿಂದ